## ದಿನಾಂಕ:29–10–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

**ವಿಷಯದ ಸಂಖ್ಯೆ: 134/2010–11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರೇಸ್‌ಕೋರ್ಸ್ ರಸ್ತೆಯ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಗೆ ಕೆ.ಆರ್.ಡಿ.ಸಿ.ಎಲ್ ರವರು ಅಂದಾಜು ಪಟ್ಟಿಯನ್ನು ರೂ.390.72 ಲಕ್ಷಗಳಿಗೆ ತಯಾರಿಸಿ, ಟೆಂಡರ್ ಅನ್ನು ಕರೆದಿರುತ್ತಾರೆ. ತದನಂತರ ಕೆ.ಆರ್.ಡಿ.ಸಿ.ಎಲ್.ನ ವ್ಯವಸ್ಥಾಪಕ ನಿರ್ದೇಶಕರವರ ಕೋರಿಕೆ ಮೇರೆಗೆ ಸರ್ಕಾರವು ಸಂಖ್ಯೆ:ನಅಇ 603 ಎಂಎನ್‌ವೈ 2007, ದಿನಾಂಕ:10–03–2008 ರಂತೆ ಕೆ.ಆರ್.ಡಿ.ಸಿ.ಎಲ್.ನಿಂದ ಸದರಿ ಕಾಮಗಾರಿಯನ್ನು ಹಿಂಪಡೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸ ಟೆಂಡರ್ ಅನ್ನು ಕರೆಯಲು ಆದೇಶವನ್ನು ನೀಡಲಾಗಿರುತ್ತದೆ. ಅದರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.390.72 ಲಕ್ಷಗಳಿಗೆ ಟೆಂಡರ್ ಅನ್ನು ಕರೆಯಲಾಗಿರುತ್ತದೆ.

ರೇಸ್‌ಕೋರ್ಸ್ ರಸ್ತೆಯ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ಬೆಂಗಳೂರು ವೃತ್ತ 2006–07 ಮತ್ತು ರಾಷ್ಟ್ರೀಯ ಹೆದ್ದಾರಿಗಳ ದರಪಟ್ಟಿ ಆಧಾರದ ಮೇಲೆ ರೂ.3,90,72,833/– (ರೂ. ಮೂರು ಕೋಟಿ ತೊಂಭತ್ತು ಲಕ್ಷದ ಎಪ್ಪತ್ತೆರಡು ಸಾವಿರದ ಎಂಟು ನೂರ ಮೂವತ್ತ್ಮೂರು ಮಾತ್ರ) ಗಳಿಗೆ ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ಸರ್ಕಾರವು ಪತ್ರ ಸಂಖ್ಯೆ:ನಅಇ–603 ಎಂ.ಎನ್.ವೈ 2007, ದಿನಾಂಕ:10–03–2008 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಮತ್ತು ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು ದಿನಾಂಕ:12–09–2008 ರಂದು ತಾಂತ್ರಿಕ ಮಂಜೂರಾತಿಯನ್ನು ನೀಡಿರುತ್ತಾರೆ.

ಈ ಕೆಲಸಕ್ಕಾಗಿ ದಿನಾಂಕ:06–03–2008 ರಲ್ಲಿ ಗುತ್ತಿಗೆ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಅನುಮೋದನೆಯನ್ನು ಕೋರಲಾಗಿದೆ. ಇದಕ್ಕೆ ಸಂಬಂಧಿಸಿದಂತೆ, ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ. ಮುನಿರತ್ನ ರವರು ನಮೂದಿಸಿರುವ 2007–08 ನೇ ಸಾಲಿನ ಬೆಂಗಳೂರು ವೃತ್ತ, ಪಿ.ಡಬ್ಲ್ಯೂ.ಡಿ. ಮತ್ತು ರಾಷ್ಟ್ರೀಯ ಹೆದ್ದಾರಿ ದರಪಟ್ಟಿಗೆ ಹೋಲಿಸಿದಾಗ ಬಂದಂಥ ಶೇ.14.48 ಹೆಚ್ಚುವರಿಯಾದ ಮೊತ್ತ ರೂ.5,71,89,726.87 (ರೂ. ಐದು ಕೋಟಿ ಎಪ್ಪತ್ತೊಂದು ಲಕ್ಷದ ಎಂಭತ್ತೊಂಭತ್ತು ಸಾವಿರದ ಏಳು ನೂರ ಇಪ್ಪತ್ತಾರು ಮತ್ತು ಎಂಭತ್ತೇಳು ಪೈಸೆಗಳು ಮಾತ್ರ) ಗಳಿಗೆ ಕಾರ್ಯನಿರ್ವಹಿಸಲು ಆದೇಶವನ್ನು ಸರ್ಕಾರವು ಸಂಖ್ಯೆ:ನಅಇ 130 ಎಂಎನ್‌ವೈ 2008, ದಿನಾಂಕ:02–06–2008 ರಂತೆ ನೀಡಿರುತ್ತದೆ ಹಾಗೂ ಈ ಕಾಮಗಾರಿಗೆ 6 ತಿಂಗಳ ಅವಧಿಯನ್ನು ನಿಗಧಿಪಡಿಸಲಾಗಿರುತ್ತದೆ.

ಈ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ. ಮುನಿರತ್ನ ರವರು ದಿನಾಂಕ:25–03–2008 ರಂದು ಕಾಮಗಾರಿಯನ್ನು ಪ್ರಾರಂಭಿಸಿರುತ್ತಾರೆ. ಕಾಮಗಾರಿಯನ್ನು ನಿರ್ವಹಿಸುತ್ತಿದ್ದಾಗ ಅಗಲೀಕರಣದ ಜಾಗದಲ್ಲಿ

.....................2

ಬಿ.ಎಸ್.ಎನ್.ಎಲ್. ನ ಕೇಬಲ್‌ಗಳು, ನೀರು ಮತ್ತು ಒಳಚರಂಡಿ ಪೈಪುಗಳು, ಯು.ಜಿ.ಕೇಬಲ್‌ಗಳು ಇದ್ದು, ಅವುಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಸ್ಥಳಾಂತರಿಸಲು ವಿಳಂಬವಾಗಿರುತ್ತದೆ. ಇದಲ್ಲದೆ, ಮರಗಳನ್ನು ತೆರವುಗೊಳಿಸುವಲ್ಲಿ ಹೈಕೋರ್ಟ್‌ನಿಂದ ತಡೆ ಆದೇಶ ಇದ್ದುದರಿಂದ, ಕಾಮಗಾರಿಯ ಪ್ರಗತಿಯಲ್ಲಿ ಕುಂಠಿತವಾಗಿರುತ್ತದೆ. ಈ ಸಮಸ್ಯೆಗಳನ್ನು ಆಗಿನ ಮಾನ್ಯ ಆಯುಕ್ತರವರ ಗಮನಕ್ಕೆ ಮತ್ತು ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರ ಅವಗಾಹನೆಗೆ ತರಲಾಗಿರುತ್ತದೆ. ಸದರಿ ಕಾಮಗಾರಿಯ ಹೆಚ್ಚುವರಿ ಮೊತ್ತದ ಅನುಮೋದನೆಗೆ ಆಗಿನ ಮಾನ್ಯ ಆಯುಕ್ತರು ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುತ್ತಾರೆ. ಇದಕ್ಕೆ ಸಂಬಂಧವಾಗಿ, ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೆಲವೊಂದು Extra Items and Additional Quantities ಗಳಿಗೆ ಆಗಬಹುದಾದ ಹೆಚ್ಚುವರಿ ಆರ್ಥಿಕ ಹೊಣೆ ರೂ.206.11 ಲಕ್ಷಗಳಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಈ ಕೆಳಗೆ ತಿಳಿಸಿರುವ Extra Items and Additional Quantities ಗಳು ಅಗತ್ಯವಾಗಿರುತ್ತದೆ.

1. <u>ಮಣ್ಣಿನ ಕೆಲಸ, ಜಿ.ಎಸ್.ಬಿ ಮತ್ತು ಡಬ್ಲ್ಯೂ.ಎಂ.ಎಂ. (Earthwork Excavation, GSB & WMM):</u>
   ಈ ಕೆಲಸಗಳಿಗಾಗಿ ರೂ.17.62 ಲಕ್ಷಗಳ ಹೆಚ್ಚುವರಿ ಆರ್ಥಿಕ ಹೊಣೆ ಇರುತ್ತದೆ. ಈ ಹೆಚ್ಚುವರಿಗೆ ಕಾರಣಗಳು ಹಾಗೂ ಅನುಮೋದಿತ ಅಂದಾಜು ಪಟ್ಟಿಯಲ್ಲಿ ಹಾಗೂ ಕೆಲಸ ಪೂರ್ಣಗೊಳಿಸಲು ಆಗಿರುವ ಐಟಂವಾರು ವಿವರ ಕೆಳಕಂಡಂತಿವೆ;

| ಕ್ರ.ಸಂ. | ಐಟಂ | ಅನುಮೋದಿತ ಅಂದಾಜು ಪಟ್ಟಿಯಲ್ಲಿನ ಪರಿಮಾಣ | ಪರಿಷ್ಕೃತ ಅಂದಾಜು ಪಟ್ಟಿಯಲ್ಲಿನ ಪರಿಮಾಣ | ಹೆಚ್ಚುವರಿ ಆರ್ಥಿಕ |
|---|---|---|---|---|
| 1 | ಮಣ್ಣಿನ ಕೆಲಸ | 22520 | 26502 | 5.57 |
| 2 | ಜಿ.ಎಸ್.ಬಿ | 3402 | 3875 | 8.51 |
| 3 | ಡಬ್ಲ್ಯೂ.ಎಂ.ಎಂ. | 4634 | 4795 | 3.54 |
| **ಒಟ್ಟು ಮೊತ್ತ** | | | | **17.62** |

ಅನುಮೋದಿತ ಅಂದಾಜು ಪಟ್ಟಿಯಲ್ಲಿ ಅಗಲೀಕರಣವು 18.25–23.00 ಮೀ.ವರೆಗೆ ಇದ್ದು, ಈ ಅಗಲೀಕರಣವು ಹಾಲಿ 21.00–25.00 ಮೀ.ವರೆಗೆ ಇರುತ್ತದೆ. ಇದಲ್ಲದೆ, ಹೈಗ್ರೌಂಡ್ಸ್ ಪೊಲೀಸ್ ಠಾಣೆ ಮತ್ತು ಮಿಲ್ಕ್ ಪಾರ್ಲರ್ ಮತ್ತು ಟರ್ಫ ಕ್ಲಬ್ ರವರ ಪಾರ್ಕಿಂಗ್ ಬಳಿ ಹೆಚ್ಚಿನ ವಿಸ್ತೀರ್ಣಗಳನ್ನು ವೃತ್ತಗಳ ಅಭಿವೃದ್ಧಿಗಾಗಿ (Improvements to Rotaries) ಮಾಡಲಾಗಿದ್ದು, ಇದಕ್ಕಾಗಿ ಹೆಚ್ಚುವರಿ ಮಣ್ಣಿನ ಕೆಲಸ, ಜಿ.ಎಸ್.ಬಿ ಮತ್ತು ಡಬ್ಲ್ಯೂ.ಎಂ.ಎಂ. ಗಳ ಕೆಲಸಗಳನ್ನು ಮಾಡುವುದು ಅವಶ್ಯಕವಾಗಿದ್ದು, ಮೇಲೆ ತಿಳಿಸಿರುವ ರೂ.17.62 ಲಕ್ಷಗಳ ಹೆಚ್ಚುವರಿ ಆರ್ಥಿಕ ಹೊಣೆಯಾಗುತ್ತದೆ.

......................3

**2.ಡೆನ್ಸ್ ಗ್ರೇಡೆಡ್ ಬಿಟುಮಿನಸ್ ಮ್ಯಾಕಡಮ್ (Dense Graded Bitumen Macadum):**

ಅನುಮೋದಿತ ಅಂದಾಜು ಪಟ್ಟಿಯಲ್ಲಿ ಡಿಬಿಎಂ. ನ (50 ಎಂಎಂ ದಪ್ಪ) ಪರಿಮಾಣ 1839.70 ಘನ ಮೀಟರ್ ಇರುತ್ತದೆ. ಮೇಲೆ ತಿಳಿಸಿರುವ ಹೆಚ್ಚುವರಿ ಅಗಲದ ಕಾರಣ, ಈ ಕೆಲಸಕ್ಕಾಗಿ ಹೆಚ್ಚಿನ Profile Corrective Course ಅನ್ನು ಮಾಡಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ, ಡೆನ್ಸ್ ಗ್ರೇಡೆಡ್ ಬಿಟುಮಿನ್ ಮ್ಯಾಕಡಮ್ ಪರಿಮಾಣವು 2879.36 ಘನ ಮೀಟರ್ ಆಗುತ್ತದೆ. ಇದಕ್ಕಾಗಿ ರೂ.88.51 ಲಕ್ಷಗಳ ಹೆಚ್ಚುವರಿ ಆರ್ಥಿಕ ಹೊಣೆಯಾಗುತ್ತದೆ.

**3. ಬಿಟುಮಿನಸ್ ಕಾಂಕ್ರೀಟ್ (ಬಿ.ಸಿ):**

ಅನುಮೋದಿತ ಅಂದಾಜು ಪಟ್ಟಿಯಲ್ಲಿ ಬಿ.ಸಿ. ನ (40 ಎಂಎಂ ದಪ್ಪ) ಪರಿಮಾಣ 1138.00 ಘನ ಮೀಟರ್ ಇರುತ್ತದೆ. ಮೇಲೆ ತಿಳಿಸಿರುವ ಹೆಚ್ಚುವರಿ ಅಗಲದ ಕಾರಣ ಈ ಕೆಲಸಕ್ಕಾಗಿ ಹೆಚ್ಚಿನ ಪರಿಮಾಣದ ಬಿಟುಮಿನಸ್ ಕಾಂಕ್ರೀಟ್ ಮಾಡಲಾಗಿದ್ದು, ಈ ಪರಿಮಾಣವು 1635.32 ಮೀಟರ್ ಆಗುತ್ತದೆ. ಇದಕ್ಕಾಗಿ, ರೂ.49.31 ಲಕ್ಷಗಳ ಹೆಚ್ಚುವರಿ ಆರ್ಥಿಕ ಹೊಣೆಯಾಗುತ್ತದೆ.

**4. ಆರ್.ಸಿ.ಸಿ.ಡ್ರೈನ್:**

ಅನುಮೋದಿತ ಅಂದಾಜು ಪಟ್ಟಿಯಲ್ಲಿ Masonry Drain ಅನ್ನು ಅಳವಡಿಸಲಾಗಿದೆ. ಕೆಲಸವು ಪ್ರಗತಿಯಲ್ಲಿದ್ದಾಗ ಆಗಿನ ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ಪರಿವೀಕ್ಷಣೆಯ ಸಮಯದಲ್ಲಿ Masonry Drain ಅನ್ನು ಅಳವಡಿಸಿದಾಗ 1.50 ಮೀ ರಷ್ಟು ಜಾಗದ ಅವಶ್ಯಕತೆವಿರುತ್ತದೆ. ಇದಕ್ಕೆ ಬದಲಾಗಿ ಆರ್.ಸಿ.ಸಿ. ಡ್ರೈನ್ ಅನ್ನು ಅಳವಡಿಸಿದಾಗ 0.90 ಮೀ ಜಾಗ ಬೇಕಾಗಿರುವುದರಿಂದ ಸುಮಾರು 0.60 ಮೀ. ಗಳಷ್ಟು ಅಗಲದ ಜಾಗವನ್ನು ಮೈನ್ ಕ್ಯಾರೇಜ್ ವೇ ಗೆ ಉಪಯೋಗಿಸಬಹುದು ಎಂದು ಸೂಚಿಸಿದರ ಮೇರೆಗೆ ಆರ್.ಸಿ.ಸಿ. ಡ್ರೈನ್ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಇದಕ್ಕೆ ಮತ್ತು ಗೇಟ್‌ಗೆ ತಗಲುವ ಮೊತ್ತ ರೂ.60.77 ಲಕ್ಷಗಳಾಗಿರುತ್ತದೆ.

ಸದರಿ ಕಾಮಗಾರಿಯ ಹೆಚ್ಚುವರಿ ಆರ್ಥಿಕ ಹೊಣೆಯನ್ನು ಗಣನೆಗೆ ತೆಗೆದುಕೊಂಡ ನಂತರದ ವಿವರಗಳು ಕೆಳಕಂಡಂತಿರುತ್ತವೆ:

| | | |
|---|---|---|
| 1 | ಅಂದಾಜು ಮೊತ್ತ | ರೂ.390.72 ಲಕ್ಷಗಳು |
| 2 | ಟೆಂಡರ್‌ಗಿಟ್ಟ ಮೊತ್ತ | ರೂ.390.72 ಲಕ್ಷಗಳು |
| 3 | ಅನುಮೋದಿತ ಟೆಂಡರ್ ಮೊತ್ತ | ರೂ.571.89 ಲಕ್ಷಗಳು |
| 4 | ಸಿ.ಎಸ್.ಆರ್.ನ ಮೊತ್ತ | ರೂ.499.55 ಲಕ್ಷಗಳು |
| 5 | ಟೆಂಡರ್ ಪ್ರೀಮಿಯಂ | ರೂ.14.48 ಹೆಚ್ಚುವರಿ |
| 6 | ಹೆಚ್ಚುವರಿ ಆರ್ಥಿಕ ಮೊತ್ತ | ರೂ.206.11 ಲಕ್ಷಗಳು |
| 7 | ಪರಿಷ್ಕೃತ ಅಂದಾಜು ಮೊತ್ತ (ಹೆಚ್ಚುವರಿ ಆರ್ಥಿಕ ಹೊಣೆ ಸೇರಿದಂತೆ) | ರೂ.777.00 ಲಕ್ಷಗಳು |
| 8 | ಟೆಂಡರ್ ಮೊತ್ತಕ್ಕೆ ಶೇಕಡಾವಾರು ಹೆಚ್ಚಳ | ಶೇ.36.04 |

.....................4

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯ ವರ್ಕ್‌ಸ್ಲಿಪ್ ಮೊತ್ತ ರೂ.166.09 ಲಕ್ಷಗಳಿಗೆ ಹಾಗೂ ಹೆಚ್ಚುವರಿ ಐಟಂ ಮೊತ್ತ ರೂ.60.78 ಲಕ್ಷಗಳಿಗೆ ಅನುಮೋದನೆ ಕೋರುತ್ತಾ, ಸದರಿ ಕಾಮಗಾರಿ ಪೂರ್ಣಗೊಂಡಿದ್ದು, ಒಟ್ಟು ಪರಿಷ್ಕೃತ ಅಂದಾಜು ಮೊತ್ತ ರೂ.7,77,00,000/- (ಏಳು ಕೋಟಿ ಎಪ್ಪತ್ತೇಳು ಲಕ್ಷಗಳು ಮಾತ್ರ) ಗಳಾಗಿದ್ದು, (ಮೂಲ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ 36.04 ಹೆಚ್ಚುವರಿಯಾಗಿದ್ದು) ಸದರಿ ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:26-10-2010 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಆಯುಕ್ತರವರ ದಿನಾಂಕ:26-10-2010ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ. ನಟರಾಜ)**
ಮಹಾಪೌರರು